(ಗೊಂದಲ)

ಅಧ್ಯಕ್ಷರು: ಈಗ ನೀವು ರಾಜಭವನದ ಮುಂಭಾಗದಲ್ಲಿ ಕಾವೇರಿ ಪ್ರಾಧಿಕಾರ ನೀಡಿರುವ ತೀರ್ಪಿನ ವಿರುದ್ದ ರಾಜಭವನಕ್ಕೆ ಮುತ್ತಿಗೆ ಹಾಕುವ ಸಂಬಂಧ.

(ಉ) ವಿಷಯ: ಡಾ: ಎಂ. ರಾಮಜೋಯಿಸರವರು ಬರೆದಿರುವ ರಾಜ್ಯ ವ್ಯವಸ್ಥೆಯ ಉಗಮ ಧ್ಯೇಯ ಮತ್ತು ಕರ್ತವ್ಯ ಆಡಳಿತಗಾರರಿಗೆ ಆಚಾರ ಸಂಹಿತೆ ಬಿಡುಗೆ ಸಮಾರಂಭ ಸಂಜೆ 5.30 ಕ್ಕೆ ಮಾನ್ಯ ಶಾಸಕರು ಭಾಗವಹಿಸುವ ಬಗ್ಗೆ.

ಈಗ ನ್ಯಾಯಮೂರ್ತಿ ಡಾ: ಎಂ ರಾಮಜೋಯಿಸ್‌ರವರು ಬರೆದಿರುವ ರಾಜ್ಯ ವ್ಯವಸ್ಥೆಯ ಉಗಮ, ಧ್ಯೇಯ ಮತ್ತು ಕರ್ತವ್ಯ ಆಡಳಿತಗಾರರಿಗೆ ಆಚಾರ ಸಂಹಿತೆಯ ಬಿಡುಗಡೆ ಸಮಾರಂಭವು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಈ ದಿನ ಸಂಜೆ 5.30 ಕ್ಕೆ ನಡೆಯಲಿದೆ. ತಾವುಗಳೆಲ್ಲರೂ ಭಾಗವಹಿಸಬೇಕೆಂದು ಈ ಮೂಲಕ ಕೋರಲಾಗಿದೆ.

3. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಕಾವೇರಿ ನದಿ ನೀರಿನ ತೀರ್ಪಿನ ಬಗ್ಗೆ ಸರ್ಕಾರದ ನಿಲುವನ್ನು ಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟಪಡಿಸುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಈ ಸಭೆಯನ್ನು ಮುಂದಕ್ಕೆ ಹಾಕುವುದಕ್ಕೆ ಮುಂಚೆ ಪ್ರತಿದಿನ ಈ ರೀತಿ ನಾವು ಯಾವ್ಯಾವದೋ ಕಾರಣಕ್ಕೆ ಸಭೆಯನ್ನು ಮುಂದಕ್ಕೆ ಹಾಕುತ್ತಿದ್ದೇವೆ. ದಿನಾಂಕ 5ರಂದು ಕಾವೇರಿ ತೀರ್ಪು ಬಂದಿತು. 14ನೇ ತಾರೀಖಾದರೂ ಈ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ತಮ್ಮ ನೀತಿಯನ್ನು, ಸರ್ಕಾರದ ನಿಲುವನ್ನು ಇನ್ನು ಸ್ಪಷ್ಟಪಡಿಸಿಲ್ಲ.

ಅಧ್ಯಕ್ಷರು: ನಿನ್ನೆ ಹೇಳಿದರಲ್ಲ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೂ ಕೂಡ ಬರುವುದಿಲ್ಲ. ಸ್ಪಷ್ಟ ಕೂಡ ಪಡಿಸುವುದಿಲ್ಲ. ಸರ್ಕಾರ ಸದನದಲ್ಲಿ ಸ್ಪಷ್ಟಪಡಿಸಬೇಕೆಂದು ಹೇಳಿ ನಾನು ಧರಣಿ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಧರಣಿ ಮಾಡಲು ಭಾವಿಗೆ ಬಂದರು)

ಅಧ್ಯಕ್ಷರು: ನಿನ್ನೆ ನೀವು ಇದ್ದಾಗಲೇ ಹೇಳಿದ್ದಾರೆ. ಈ ದಿನ ದೆಹಲಿಗೆ ಬೇರೆ ಕೆಲಸಕ್ಕೆ ಹೋಗಿದ್ದಾರೆ. ನಾಳೆ ಅವರು ಬರುತ್ತಾರೆ. ನಿನ್ನೆ ನಿಮ್ಮ

ಎದುರಿನಲ್ಲೆ House ನಲ್ಲಿ ಹೇಳಿದ್ದಾರೆ. ಆ ಕಾರಣದಿಂದ ನಾಳೆ ಬಂದಾಗ ಮಾಡಿಸೋಣ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಶ್ರೀ ಜೆ. ಸಿ. ಮಾಧುಸ್ವಾಮಿ: ಅಲ್ಲಿ ನಿಂತು ಮಾತನಾಡುವ ಹಾಗೆ ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಧರಣಿಯಲ್ಲಿ ಕುಳಿತವರು ಮಾತನಾಡಬಾರದು.

ಶ್ರೀ ಎಂ.ಪಿ. ವೆಂಕಟೇಶ್: ಸರ್ವ ಪಕ್ಷಗಳ ನಿಯೋಗದ ವಿಚಾರ ಕೇಳಿ ಆಮೇಲೆ ತಾನೆ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತೇನೆ ಎಂದಿರುವುದು.

ಶ್ರೀ ಎಂ.ಪಿ. ಪ್ರಕಾಶ್: (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟೀಕರಣ ಕೊಟ್ಟಿದ್ದಾರೆ. ನಮ್ಮ ರಾಜ್ಯದ ಅನೇಕ ಬೇಡಿಕೆಗಳು ಹಾಗೂ ಯೋಜನೆಗಳು ಕೇಂದ್ರ ಸರ್ಕಾರದಲ್ಲಿ ಹಾಗೆಯೇ ಇರುವುದರಿಂದ, ಮಾನ್ಯ ಪ್ರಧಾನ ಮಂತ್ರಿಗಳು ಕೊಟ್ಟಂತಹ ಸಮಯವನ್ನು ಉಪಯೋಗಿಸಿಕೊಂಡು ಅಲ್ಲಿ ಅವರ ಜೊತೆಗೆ ಮಾಡನಾಡುವುದಕ್ಕೆ ಹಾಗೂ ವಿವಿಧ ಸಚಿವಾಲಯಗಳಿಗೆ ಅವರು ಹೋಗಿದ್ದಾರೆ. ಅಲ್ಲಿ ಬೇರೆ ಬೇರೆ ವಿಚಾರಗಳನ್ನು ರಾಜ್ಯದ ಹಿತದೃಷ್ಟಿಯಿಂದ ಮಾಡುತ್ತಾರೆ. ನಾವು ಸರ್ವ ಪಕ್ಷಗಳ ಮುಖಂಡರನ್ನು ಕರೆಸಿ ಅವರ ತೀರ್ಮಾನದ ಪ್ರಕಾರವಾಗಿ, ಅವರ ಮಾರ್ಗದರ್ಶನದಲ್ಲಿ ಒಕ್ಕೊರಲಿನ ಅಭಿಪ್ರಾಯಕ್ಕೆ ನಾವು ಬರುತ್ತೇವೆಂದು ಅವರು ಇದೇ ಸದನದಲ್ಲಿ ಸ್ಪಷ್ಟಪಡಿಸಿದ್ದಾರೆ. ನಾವು ಈಗಾಗಲೇ ಸಾವಿರ ಪುಟಗಳ ತೀರ್ಮಾನವನ್ನು ಎಲ್ಲಾ ಸದಸ್ಯರಿಗೆ ಹಾಗೂ ಸಂಸತ್ ಸದಸ್ಯರಿಗೆ ಕೊಟ್ಟು ಕಳುಹಿಸಿದ್ದೇವೆ. ಅದನ್ನು ಓದಿಕೊಂಡು ಬರುವುದಕ್ಕೆ ಅವರಿಗೆ ಕಾಲಾವಕಾಶ ಬೇಕು. ಮಾನ್ಯ ಮುಖ್ಯ ಮಂತ್ರಿಗಳು ನಾಳೆ ಬರುತ್ತಾರೆ. ಬಹುತೇಕ 22ನೇ ತಾರೀಖಿನೊಳಗಾಗಿ ಒಂದು ಸಭೆಯನ್ನು ಕರೆಯಬೇಕು ಎನ್ನುವಂತಹ ಇಂಗಿತವನ್ನು ಕೂಡ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರುವುದರಿಂದ ಖಂಡಿತವಾಗಿ ಸರ್ವ ಪಕ್ಷಗಳ ಸಭೆಯನ್ನು ಕರೆಯುತ್ತೇವೆ. ನಿಮ್ಮೆಲ್ಲ ಅಮೂಲ್ಯ ಸಲಹೆಗಳ ಆಧಾರದ ಮೇಲೆ ಸರ್ಕಾರ ಮುಂದಿನ ಹೆಜ್ಜೆಯನ್ನು ಇಡುತ್ತದೆ. ಕಾನೂನಿನ ಚೌಕಟ್ಟಿನಲ್ಲಿ ಈ ಸಮರವನ್ನು ಹೇಗೆ ನಡೆಸಬೇಕು? ಅದರ ಸಾಧಕ-ಭಾದಕಗಳು ಏನು? ರಾಜಕೀಯವಾಗಿ ಒತ್ತಡದ ತಂತ್ರಗಳನ್ನು ಯಾವರೀತಿ ತರಬೇಕು? ಇಡೀ ರಾಜ್ಯದ ಜನತೆ ಒಕ್ಕೊರಲಿನಿಂದ ಈ ವಿಚಾರವನ್ನು

ಮಾತನಾಡಿದಾಗ ಅದು ಕೇಂದ್ರ ಸರ್ಕಾರದ ಮೇಲೂ ಕೂಡ ಪ್ರಭಾವ ಬೀಳುತ್ತದೆ ಎನ್ನುವ ರೀತಿಯಲ್ಲಿ ನಾವು ಅಪಸ್ವರಕ್ಕೆ, ಒಡಕಿನ ಧ್ವನಿಗೆ ಅವಕಾಶ ಇಲ್ಲದ ರೀತಿಯಲ್ಲಿ ನಾವು ಮಾಡುತ್ತೇವೆ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ಇದೇ ಸದನದಲ್ಲಿ ಸ್ಪಷ್ಟಗೊಳಿಸಿದ್ದಾರೆ. ನಾನು ಮತ್ತೆ ಅದರ ಪುನರುಚ್ಚಾರವನ್ನು ಮಾಡಿದ್ದೇನೆ. ಇದರ ಜೊತೆಗೆ ಮೇಲ್ಮನೆಯ ವಿಚಾರದಲ್ಲಿ ಇರುವಂತಹ ಗೊಂದಲ ಅದನ್ನು ಸರಿಪಡಿಸಬೇಕು ಎನ್ನುವ ವಿಚಾರಕ್ಕೆ ಕೆಲವು ಸಲಹೆಗಳನ್ನು ನಾವು ಅವರಿಗೆ ಕೊಟ್ಟಿದ್ದೇವೆ. ಆ ಸಲಹೆ ಬಗ್ಗೆ ಕೂಡ ಪರ್ಯಾಲೋಚಿಸಿ, ಅದರ ಬಗ್ಗೆ ವಿಧಾನ ಪರಿಷತ್ತಿನಲ್ಲಿರುವ ಸಭಾನಾಯಕರು, ಅಲ್ಲಿರುವಂತಹ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಸದಸ್ಯರನ್ನು ಕರೆಸಿ ಮಾತನಾಡುತ್ತೇವೆಂದು ಅಲ್ಲಿನ ಹಿರಿಯ ಸದಸ್ಯರು ಮಾತನಾಡಿರುವುದರಿಂದ, ಅವರ ಚರ್ಚೆಗೆ ಕಾಲಾವಕಾಶ ಬೇಕಾಗಿರುವುದರಿಂದ ದಯವಿಟ್ಟು ನಾಳೆವರೆಗೆ ಸದನವನ್ನು ಮುಂದೂಡಬೇಕೆಂದು ಹೇಳಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಈ ಸಭೆಯಲ್ಲಿ ಅನೇಕ ನಿರ್ಣಯಗಳು ಕಾವೇರಿ ಬಗ್ಗೆ ಮತ್ತು ಸಿ.ಇ.ಟಿ ಬಗ್ಗೆ ಬೇಕಾದಷ್ಟು ಸಲ ಆಗಿದೆ. ಇದರ ಬಗ್ಗೆ ಒಂದು ದಿವಸ ಯಾವತ್ತಾದರೂ ಚರ್ಚೆ ಮಾಡಿ ಒಂದು ನಿರ್ಣಯ ಮಾಡಿ ಏನಾದರೂ ಮಾಡಿ ಮುಕ್ತಾಯ ಮಾಡಿದಿದ್ದರೆ.....ಇನ್ನು ಈ ಸಭೆಯ ಕಾಲ ಕೇವಲ 4 ದಿವಸ ಉಳಿದುಕೊಂಡಿರುವುದು. ಎಲ್ಲಾದರೂ ಒಂದು ಕಡೆ ಯಾರಾದರೂ ರಾಜಿಯಾಗಿ, ಈಗ ಹೇಳಿದ್ದನ್ನೆ ನಮ್ಮ ನಿಲುವು ಎಂದು ನಿರ್ಣಯ ಮಾಡುವುದು. ನಾವು ಹೀಗೆ ಮಾಡುವುದು ಎಂದು, ಅದರಲ್ಲಿ ಏನು ತಪ್ಪು? ಅದರಲ್ಲಿ ಏನೂ ತಪ್ಪಾಗುತ್ತಿರಲಿಲ್ಲ. ದಯಮಾಡಿ ಸರ್ಕಾರ ಒಂದು ತೀರ್ಮಾನಕ್ಕೆ ಬರಬೇಕು. ಈ ಮನೆಯ ಪ್ರಾಶಸ್ತ್ಯವನ್ನು ಅಷ್ಟು ಸುಲಭವಾಗಿ ನಾವು ಸರ್ವ ಪಕ್ಷಗಳ ಸಭೆಗೆ ಬಿಡಬಾರದು. ಅದು ಬೇರೆ, ಆ ಸಭೆಯನ್ನು ಕರೆಯುತ್ತೀರಿ, ಬೇರೆ ಪಕ್ಷಗಳ ವಿಶ್ವಾಸವನ್ನು ಇಟ್ಟುಕೊಂಡಿದ್ದೀರಿ, ನಮಗೆ ಸಂತೋಷ. ಆದರೆ ಇದರ ಸಾರ್ವಭೌಮತ್ವ ಕೂಡ ಉಳಿದುಕೊಳ್ಳಬೇಕಲ್ಲ. ಶಾಸನ ಸಭೆ ಸಾರ್ವಭೌಮತ್ವವನ್ನು ಸರ್ವ ಪಕ್ಷಗಳ ಸಭೆಗೆ delegate ಮಾಡುವುದಕ್ಕೆ ಆಗುವುದಿಲ್ಲ. ಪ್ರತಿಸಲ ನೀವು ಸರ್ವಪಕ್ಷಗಳ ಸಭೆಯಲ್ಲಿ ತೀರ್ಮಾನವಾಗಲಿ ಎನ್ನುವುದು ಆರೋಗ್ಯಕರ ಬೆಳವಣಿಗೆ ಆದರೂ ಕೂಡ ಶಾಸನಸಭೆ ಸಾರ್ವಭೌಮತ್ವವನ್ನು ದಯಮಾಡಿ ಕೆಳಗೆ

ತೆಗೆದುಕೊಂಡು ಹೋಗುವಂತಹ ಸ್ಥಿತಿಯನ್ನು ನಿರ್ಮಾಣ ಮಾಡಬೇಡಿ. ಈ ಸಭೆಯಲ್ಲಿ ಏನಾದರೂ ಒಂದು ನಿರ್ಣಯವನ್ನು ಮಾಡೋಣ. ತಪ್ಪೇನು ಆಗುವುದಿಲ್ಲ ಎನ್ನುವುದು ನನ್ನ ಭಾವನೆ.

ಶ್ರೀ ಎಸ್. ರಾಜೇಂದ್ರನ್: ಮಾನ್ಯ ಅಧ್ಯಕ್ಷರೆ, ಅದು ನಿಜ. ಕರ್ನಾಟಕದಲ್ಲಿ ಶಾಸನಸಭೆ ಕಾವೇರಿ ನೀರಿನ ಬಗ್ಗೆ ಏನು ತೀರ್ಮಾನ ತೆಗೆದುಕೊಂಡಿದೆ ಎನ್ನುವುದು ಹೊರಗಡೆ ಹೋಗಬೇಕು. ನಾವು ಅದನ್ನು ಇನ್ನು ಮಾಡಿಲ್ಲ. ಹಾಗಾದರೆ ನಾವು ಇಲ್ಲಿ ಶಾಸಕರಾಗಿ ಕುಳಿತುಕೊಂಡು ಸುಮ್ಮನೆ ಹೊರಗಡೆ ಹೋರಾಟ ಮಾಡಿಕೊಂಡಿದ್ದರೆ ಏನು ಪ್ರಯೋಜನ ಇದೆ? What is our stand? ನಮ್ಮ ಸಭೆ ಏನು ತೀರ್ಮಾನ ತೆಗೆದುಕೊಂಡಿದೆ. ಚುನಾವಣೆಗೆ ಮಾತ್ರ ತಾವು ಎಷ್ಟೋ ಸಲ ಹೇಳಿದ್ದೀರಿ, ಜನ ನೋಡುತ್ತಿದ್ದಾರೆ ಎಂದು. ಈ ಸಭೆ ಏನು ತೀರ್ಮಾನ ಮಾಡಿದೆ ಎಂದು ಇದನ್ನು ಕೂಡ ಜನ ನೋಡುತ್ತಿದ್ದಾರೆ. ಈ ಸಭೆಯಲ್ಲಿ ಸುಮ್ಮನೆ ಕೂಗಾಡಿಕೊಂಡು ಕುಳಿತಿದ್ದಾರಾ? ಜನರಿಗೆ ತೊಂದರೆ ಕೊಟ್ಟುಕೊಂಡಿದ್ದಾರೋ, ಇವರು ಏನು ತೀರ್ಮಾನ ಮಾಡಿಲ್ಲವೆಂದು ಹೇಳಿ ಸುದ್ದಿ ಬರುತ್ತದೆ. ಆದ್ದರಿಂದ ನಮ್ಮ ಸಭೆ ಏನು ತೀರ್ಮಾನ ಮಾಡಿದೆ? ನೀರು ಕೊಡಬೇಕಾ ಅಥವಾ ಕೊಡಬಾರದಾ? ಅದರ ಬಗ್ಗೆ ನಾವು ಮೇಲ್ಮನವಿ ಹೋಗಬೇಕಾ? ಬೇಡವೇ? ಇದರ ಬಗ್ಗೆ ಏನಾದರೂ ತೀರ್ಮಾನ ತೆಗೆದುಕೊಳ್ಳಬೇಕು ಸ್ವಾಮಿ. ನಾಲ್ಕು ದಿವಸ, ಒಂದು ವಾರ ಪಾಪ ನಮ್ಮ senior ಮಾನ್ಯ ವಾಟಾಳ್ ಸಾಹೇಬರು ...

ಶ್ರೀ ಎನ್. ಚೆಲುವರಾಯ ಸ್ವಾಮಿ (ಸಾರಿಗೆ ಸಚಿವರು): ಪಾಪ ಎಂತದ್ದು? ಅವರು ಇಡೀ ಸದನಕ್ಕೆ ಅವರು ಬಹಳ ಹಿರಿಯರು. ಹೋರಾಟ ಮಾಡುವುದಕ್ಕೆ ಅವರಿಗೆ ಇರುವಂತಹ ...

ಶ್ರೀ ಎಸ್. ರಾಜೇಂದ್ರನ್: ಹಾಗಾದರೆ ಏನು ತೀರ್ಮಾನ ತೆಗೆದುಕೊಳ್ಳಬೇಕು ಎಂದು ನೀವೇ ಉತ್ತರ ಕೊಡಿ. ಕೊಡಿ, ಇದಕ್ಕೆ ಹೇಳಿದ್ದು ಪಾಪ ಎಂದು. ಇವರು ನಾಟಕಗಳೆಲ್ಲ ಪಾಪ ಎಂದು ಹೇಳುವುದು. ಅದನ್ನು ನಾನು ಹೇಳಿದ್ದು. ಅವರು ಪಾಪ, ಆದ್ದರಿಂದ ಅವರ ಮೇಲೆ ಅಷ್ಟು ಪ್ರೀತಿ ಇದ್ದರೆ ತೀರ್ಮಾನ ಕೊಡಿ. ಮಾನ್ಯ ಅಧ್ಯಕ್ಷರೆ, ತಾವು ಒಂದು ರೂಲಿಂಗ್ ಏನಾದರೂ ಕೊಟ್ಟು ಇದಕ್ಕೆ ಒಂದು end ತೆಗೆದುಕೊಂಡು ಬರಬೇಕು.

ಡಾ: ಕೆ. ಅನ್ನದಾನಿ: ಮಾನ್ಯ ಅಧ್ಯಕ್ಷರೆ, ಆ ಮನೆಗೆ ಸಂಬಂಧಪಟ್ಟಂತೆ ಈ ಮನೆಯಲ್ಲಿ ನಿನ್ನೆ ದಿನದಿಂದ ಇವತ್ತಿನವರೆಗೂ ನಾನು ಮಾತನಾಡುವುದಕ್ಕೆ ಅವಕಾಶ ಕೊಡಿ.

ಈಗ ಮೇಲ್ಮನೆಯಲ್ಲಿ ಗೊಂದಲವಾಗಿದೆಯೆಂದು ಹೇಳಿ, ಇಲ್ಲಿ ಎರಡು ದಿವಸಗಳಿಂದ ಸಭೆಯನ್ನು ...

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಈಗ ಇಲ್ಲಿ ಕಾವೇರಿ ವಿಚಾರ ಪ್ರಸ್ತಾಪವಾಗಿದೆ. ಈ ವಿಷಯವನ್ನು ಮುಗಿಸಿಬಿಡಿ. ಆಮೇಲೆ ಬೇಕಾದರೆ, ಅವರು ಮಾತನಾಡಲು ಅವಕಾಶವನ್ನು ಕೊಡಿ. ಇದರ ಬಗ್ಗೆ ಏನಾದರೂ ಒಂದು ಇತ್ಯರ್ಥವಾಗಬೇಕಲ್ಲಾ... ಈಗ ಮಾನ್ಯ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಲ್ಲಿ ಧರಣಿಗೆ ಕುಳಿತಿದ್ದಾರೆ. ಈ ವಿಷಯ ಇತ್ಯರ್ಥವಾಗದೇ, ಅವರು ಮಾತನ್ನು ಪ್ರಾರಂಭ ಮಾಡಿದರೆ ಹೇಗೆ? ಈಗ ವಿಷಯಾಂತರವಾಗುವುದು ಬೇಡ.

ಅಧ್ಯಕ್ಷರು: ಈಗ ಕಾನೂನು ಮತ್ತು ಸಂಸದೀಯ ಸಚಿವರು ಹೇಳಿದ್ದಾರೆ.

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಈಗ ಮಾನ್ಯ ಅನ್ನದಾನಿಯವರು ಮೇಲ್ಮನೆಯ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರೆ.

ಡಾ:ಕೆ.ಅನ್ನದಾನಿ: ಮಾನ್ಯ ಅಧ್ಯಕ್ಷರೆ, ಮೇಲ್ಮನೆಯಲ್ಲಿ ಒಂದು ವಾರದ ಕಾಲ ಸದನ ನಡೆದಿಲ್ಲ. ಮೇಲ್ಮನೆಯಲ್ಲಿ ಸದನ ನಡೆಯದೆ ಇರುವ ವಿಚಾರವನ್ನು ಇಲ್ಲಿ ಎತ್ತಿಕೊಂಡು.. .. ..

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಅವರು ಮೇಲ್ಮನೆಯ ವಿಚಾರವನ್ನು ತೆಗೆದುಕೊಳ್ಳುತ್ತಿದ್ದಾರೆ. ಅದು ಬೇಡ, ಈಗ ಪ್ರಸ್ತಾಪ ಆಗಿರುವ ವಿಚಾರವನ್ನು ಮುಗಿಸಿಬಿಡಿ. ಇಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರನ್ನು ಸದನದ ಬಾವಿಯಲ್ಲಿ ಕೂರಿಸಿ, ಬೇರೆ ವಿಚಾರವನ್ನು ವಿಚಾರ ಮಾಡುವುದಕ್ಕೆ ಆಗುತ್ತದಾ? ಕಾಂಗ್ರೆಸ್ ಪಕ್ಷದವರು ಧರಣಿ ಮಾಡಿದರೆ, adjourn ಮಾಡಿ ಹೋಗಿ ಬಿಡುತ್ತೀರಿ. ಇಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಧರಣಿ ಕುಳಿತರೆ ಏನಾದರೂ ಹೇಳಬೇಕಲ್ಲಾ.. ..

ಅಧ್ಯಕ್ಷರು: ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರೆ, ತಾವು ಏನಾದರೂ ಹೇಳಿಬಿಡಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಇಲ್ಲಿ ಬೇರೆಯವರು ಧರಣಿಗೆ ಕುಳಿತರೆ, adjourn ಮಾಡಿ ಒಳಗಡೆ ಹೋಗಿ ಬಿಡುತ್ತೀರಿ. ಈಗ ಅವರು ಇಲ್ಲಿ ಧರಣಿಗೆ ಕುಳಿತಿದ್ದಾರೆ. ಈಗ ಏನಾದರೂ ಹೇಳಿ, ನೀವು ಏನು ಹೇಳುತ್ತೀರೆಂಬುದನ್ನು ಈಗ ಹೇಳಿ.

ಶ್ರೀ ಡಿ.ಟಿ.ಜಯಕುಮಾರ್: ಮಾನ್ಯ ಅಧ್ಯಕ್ಷರೆ, ಹೊರಗಡೆ ಕಾವೇರಿ ನೀರಿಗೋಸ್ಕರ ಪರದಾಟ ಮಾಡುತ್ತಿದ್ದಾರೆ, ಹೋರಾಟವನ್ನು ಮಾಡುತ್ತಿದ್ದಾರೆ. ಮಾನ್ಯ ವಾಟಾಳ್ ನಾಗರಾಜ್‌ರವರು ಹೋರಾಟವನ್ನು ಮಾಡುವವರಲ್ಲಿ ಮೊದಲಿಗರು. ಆದರೆ ಅವರು ಇಲ್ಲಿ ನೀರಿಲ್ಲದ ಬಾವಿಯಲ್ಲಿ ಬಂದು ಕುಳಿತುಕೊಂಡು ಹೋರಾಟ ಮಾಡುವುದರಲ್ಲಿ ಅರ್ಥವಿದೆಯಾ? ತಾವು ಕಾವೇರಿ ಹೋರಾಟ ಮಾಡುವವರು, ತಾವು ಮಾರ್ಗದರ್ಶನ ನೀಡುವವರು, ನೀವು ನೀರಿಲ್ಲದ ಬಾವಿಗೆ ಬಂದಿದ್ದಿರಲ್ಲಾ, ದಯವಿಟ್ಟು ತಾವು ತಮ್ಮ ಸ್ಥಾನದಲ್ಲಿ ಕುಳಿತು ಕಲಾಪವನ್ನು ನಡೆಸಿಕೊಡಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಧರಣಿ ಕುಳಿತಿದ್ದಾರೆ. ನೀವು ಏನಾದರೂ ಹೇಳಿ. ನೀವಾದರೂ convince ಮಾಡಿ, ಇಲ್ಲಿಗೆ ಕರೆಸಿ.

ಶ್ರೀಮತಿ ಜೆ.ಸುನೀತಾ ವೀರಪ್ಪಗೌಡ: ಮಾನ್ಯ ಅಧ್ಯಕ್ಷರೆ, ನಮಗೂ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ. ನಾವು ನಿನ್ನೆ ದಿವಸದಿಂದ ನೋಡುತ್ತಿದ್ದೇವೆ. ನಾವು ಮೊದಲನೆಯ ಸಾರಿ ಗೆದ್ದು ಬಂದಿರುವಂಥವರು. ಇವರೇ ಬಂದು ಸದನದ ಬಾವಿಯಲ್ಲಿ ಬಂದು ನಿಂತು ಕೊಳ್ಳುವುದು, ಕಾವೇರಿ ವಿಚಾರದಲ್ಲಿ ನಮ್ಮದು ಎಲ್ಲರ ವಿರೋಧವಿದೆ. ಅದನ್ನು ಮಾನ್ಯ ಮುಖ್ಯಮಂತ್ರಿಯವರು ಆಗಲೇ ಹೇಳಿ ಹೋಗಿದ್ದಾರೆ. ಆದರೂ ಕೂಡ ಬೆಳಿಗ್ಗೆ 11.00 ಗಂಟೆಯಿಂದ 4.00ಗಂಟೆಯವರೆಗೂ ಸುಮ್ಮನೆ ಕುಳಿತಿದ್ದೇವೆ. ಈಗ ಪುನ: ಬಂದು ಇವರೊಬ್ಬರಿಗೆ ಕಾಳಜಿ ಇರುವ ಹಾಗೆ ಸದನದ ಬಾವಿಗೆ ಬಂದು ನಿಂತರೆ, ನಮಗೆಲ್ಲಾ ಕಾವೇರಿ ವಿಚಾರವಾಗಿ ಕಾಳಜಿ ಇಲ್ಲವಾ? ದಯಮಾಡಿ ಸಭೆಯನ್ನು ಸರಿಯಾಗಿ ನಡೆಸಿಕೊಡಿ.

ಡಾ: ಕೆ.ಅನ್ನದಾನಿ: ಮಾನ್ಯ ಅಧ್ಯಕ್ಷರೆ, ಈಗ ಮೇಲ್ಮನೆಯ ವಿಚಾರವಾಗಿ ಈ ಮನೆಯಲ್ಲಿ..

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಅವರು ವಿಷಯಾಂತರ ಮಾಡುತ್ತಿದ್ದಾರೆ.

ಡಾ: ಕೆ.ಅನ್ನದಾನಿ: ನಾನು ಏನು ಹೇಳುತ್ತೇನೆಂಬುದನ್ನು ತಾವು ಕೇಳಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಧರಣಿ ಕುಳಿತಿದ್ದಾರೆ. ಅದರ ಬಗ್ಗೆ ಏನಾದರೂ ಮಾಡಿ.

ಡಾ: ಕೆ.ಅನ್ನದಾನಿ: ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಅನುಮತಿಯ ಮೇರೆಗೆ ಮಾತನಾಡುತ್ತಿದ್ದೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಅವರು ಬೇರೆ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ.

ಡಾ:ಕೆ.ಅನ್ನದಾನಿ: ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿಯನ್ನು ಪಡೆದು ಮಾತನಾಡುತ್ತಿದ್ದೇನೆ. ನಾನು ಏನು ಬೇಕಾದರೂ ಮಾತನಾಡುತ್ತೇನೆ. ನನಗೆ ಹಕ್ಕು ಇದೆ.

ಶ್ರೀ ಎಂ.ಪಿ.ವೆಂಕಟೇಶ್: ಇಲ್ಲಿ ಪ್ರತಿ ದಿವಸ ನಿಮ್ಮದೇ ಭಾಷಣ. ಅವರು ಮಾತನಾಡಲಿ, ಬಿಡಿ. ಮಾನ್ಯ ಅಧ್ಯಕ್ಷರೆ, ದಯವಿಟ್ಟು ಅವರಿಗೆ ಮಾತನಾಡಲು ಅವಕಾಶವನ್ನು ಕೊಡಿ.

ಅಧ್ಯಕ್ಷರು: ಮಾನ್ಯ ವಾಟಾಳ್ ನಾಗರಾಜ್‌ರವರೆ, ತಾವು ತಮ್ಮ ಸ್ಥಾನಕ್ಕೆ ಹೋಗಿ. ಅವರು ಹುಡುಗರು ಏನೋ ಮಾತನಾಡುತ್ತಾರೆ, ನೀವು ಹಿರಿಯ ಸದಸ್ಯರು ನಿಮ್ಮ ಸ್ಥಾನಕ್ಕೆ ಹೋಗಿ. ಮಾನ್ಯ ಸಚಿವರು ಉತ್ತರ ಕೊಡುತ್ತಾರೆ ನೀವು ನಿಮ್ಮ ಸ್ಥಾನಕ್ಕೆ ಹೋಗಿ.

ಡಾ: ಕೆ.ಅನ್ನದಾನಿ: ಮಾನ್ಯ ಅಧ್ಯಕ್ಷರೆ, ಮೇಲ್ಮನೆಯನ್ನು constitute ಮಾಡಿರುವಂಥಾದ್ದು, ಅದು ಬಹಳ ಬುದ್ಧಿವಂತರ ಮನೆಯೆಂದು ನಾವು ಅರ್ಥಮಾಡಿಕೊಂಡಿದ್ದೇವೆ. ಬುದ್ಧಿವಂತರು ಇರತಕ್ಕ ಈ ಮನೆಯಲ್ಲಿ ಮೇಲ್ಮನೆಯ ಸಭಾಪತಿಯವರ ಚುನಾವಣೆ ನಡೆಸದೇ ಇರುವುದರ ಬಗ್ಗೆ ಇಲ್ಲಿ ಹೆಚ್ಚಾಗಿ ವಿರೋಧವನ್ನು ವ್ಯಕ್ತಪಡಿಸುತ್ತಿದ್ದಾರೆ, ಹಾಗೆಯೇ ಕಳೆದ 8–10 ದಿವಸಗಳ ಕಾಲ ಮೇಲ್ಮನೆ ಕಲಾಪಗಳು ನಡೆಯದೇ ಇರುವಂಥಾದ್ದನ್ನು ನಾವು ನೋಡಿದ್ದೇವೆ. ಅದು ಯಾವ ಕಾರಣಕ್ಕೋಸ್ಕರ ಇಷ್ಟೊಂದು ಗೊಂದಲವಾಗಿದೆಯೆಂಬುದು ಸ್ವಲ್ಪಮಟ್ಟಿಗೆ ನಮಗೆ ತಿಳಿದಿರುವ ವಿಚಾರ. ಆದರೆ ಮೇಲ್ಮನೆಯ ವಿಚಾರವನ್ನು ಈ ಮನೆಗೆ ತಂದು ಇಲ್ಲೂ ಕೂಡ ಜಗಳವನ್ನು ಗಂಟು ಹಾಕುವಂತಹ ವ್ಯವಸ್ಥೆಯನ್ನು ಮಾಡಿರುವಂಥಾದ್ದು, ನಿಜವಾಗಿಯೂ ಇದನ್ನು ನಾವು ವಿರೋಧ ಮಾಡುವ ವಿಚಾರ. ಕಾವೇರಿ ವಿಚಾರದಲ್ಲಿ ಹತ್ತಿ ಉರಿಯುತ್ತಿದೆ. ಅದನ್ನು ವಚನದಲ್ಲೂ ಹೇಳಿದ್ದಾರೆ. "ಒಲೆ ಹತ್ತಿ ಉರಿದೊಡೆ ನಿಲಬಹುದಲ್ಲದೆ, ಧರೆ ಹತ್ತಿ ಉರಿದೊಡೆ ನಿಲಬಹುದೇ?", ಎಂದು ಹೇಳಿದ್ದಾರೆ. ಇಡೀ ಧರೆ ಹತ್ತಿ ಉರಿಯುತ್ತಿರುವಂತಹ ಈ ಸಂದರ್ಭದಲ್ಲಿ, ಯಾವುದೋ ಒಂದು ಕ್ಷುಲ್ಲಕ ವಿಚಾರಕ್ಕೋಸ್ಕರ ಸಂಪೂರ್ಣವಾಗಿ ಈ ಸದನವನ್ನು ಬಲಿ ಕೊಟ್ಟು, ಇವರು ಸದನದ ಬಾವಿಯಲ್ಲಿ ನಿಂತು, ಕಾವೇರಿ ವಿಚಾರವನ್ನು ಸಂಪೂರ್ಣವಾಗಿ ಗಾಳಿಗೆ ತೂರಿ, ಯಾವುದೋ ಒಂದು ವಿಚಾರಕ್ಕೋಸ್ಕರ ಈ ಸದನದ ಸಮಯವನ್ನು ಹಾಳು ಮಾಡುತ್ತಿರುವಂಥಾದ್ದು, ನಮಗೆ ತುಂಬಾ

ಬೇಸರವನ್ನು ತಂದಿದೆ. ಇದು ರಾಜಕೀಯ ಬೇರೆ ಕಡೆ ಮಾಡಲಿ, ನಾವು ಒಂದು ಪಕ್ಷದಿಂದ ಗೆದ್ದು ಬಂದಿದ್ದೇವೆ. ಅವರು ಒಂದು ಪಕ್ಷದಿಂದ ಗೆದ್ದು ಬಂದಿದ್ದಾರೆ. ಆ ಪಕ್ಷದ ವಿಚಾರಗಳನ್ನು ಈ ಮನೆಯಿಂದ ಹೊರಗೆ ಪಬ್ಲಿಕ್‌ನಲ್ಲಿ ಎಲ್ಲಾದರೂ ಅವರು ಮಾತನಾಡಲಿ, ಆದರ ಬಗ್ಗೆ ನಮ್ಮ ಅಡೆತಡೆ ಇಲ್ಲ. ಆದರೆ ಕಳೆದ ಎರಡು ದಿವಸಗಳಿಂದ ಇಲ್ಲಿ ನಡೆಯುತ್ತಿರುವಂತಹ ರೀತಿ ನೀತಿಗಳನ್ನು ನೋಡಿದರೆ, ನಿಜವಾಗಿಯೂ ನಾವು ಬೆಳಿಗ್ಗೆ ಸದನಕ್ಕೆ ಬರುವುದು ಏತಕ್ಕೆ? ಇಲ್ಲವೆಂದರೆ ಸದನವನ್ನು ಸಂಪೂರ್ಣವಾಗಿ ನಿಲ್ಲಿಸಿ ಬಿಡಿ, ಕೊನೆ ಮಾಡಿ ಬಿಡಿ. ಇಲ್ಲಿ ಏನು ಚರ್ಚೆ ಮಾಡುವುದು ಬೇಡ. ಯಾರಿಗಾದರೂ ನೀರು ಸಿಗಲಿ, ಅದು ತಮಿಳುನಾಡಿಗಾದರೂ ಹೋಗಲಿ, ಆಂಧ್ರ ಪ್ರದೇಶದವರು ಕಿತ್ತುಕೊಂಡು ಹೋಗಲಿ. ಯಾರಾದರೂ ಈ ದೇಶವನ್ನು, ಈ ರಾಜ್ಯವನ್ನು ಕೊಳ್ಳೆ ಹೊಡೆದುಕೊಂಡು ಹೋಗಲಿ, ನಾವು ಯಾರೂ ಇದರ ಬಗ್ಗೆ ತಲೆ ಕೆಡಿಸಿಕೊಳ್ಳುವುದು ಬೇಡ. ಆದರೆ ಕಾವೇರಿ ವಿಚಾರವಾಗಿ.. .. ..

ಅಧ್ಯಕ್ಷರು: ಆಯಿತು. ಡಾ:ಅನ್ನದಾನಿಯವರೆ, ಇದು ಬಹಳ ಸೂಕ್ಷ್ಮವಾದ ವಿಚಾರ, ಜಾಸ್ತಿ ಲಂಬಿಸುವುದು ಬೇಡ.

ಡಾ:ಕೆ.ಅನ್ನದಾನಿ: ಮಾನ್ಯ ಅಧ್ಯಕ್ಷರೆ, ನಾವು ಅಪರೂಪಕ್ಕೆ ಮಾತನಾಡುವವರು, ನೀವು ನಮಗೆ ಹತ್ತು ನಿಮಿಷ ಮಾತನಾಡಲು ಸಮಯವನ್ನು ಕೊಡುವುದಿಲ್ಲವೆಂದರೆ, ನಾವು ನಿಜವಾಗಿಯೂ ನಿಮ್ಮ ಮುಂದೆ ಧರಣಿ ಕುಳಿತುಕೊಳ್ಳಬೇಕಾಗುತ್ತದೆ. ದಯವಿಟ್ಟು ನಾವು ಎರಡು ನಿಮಿಷ ಮಾತನಾಡುತ್ತೇವೆ, ದಯಮಾಡಿ ನೀವು ಆಲಿಸಬೇಕು.

ಅಧ್ಯಕ್ಷರು: ಇದು ಸೂಕ್ಷ್ಮವಾದ ವಿಚಾರ.

ಡಾ:ಕೆ.ಅನ್ನದಾನಿ: ಮಾನ್ಯ ಅಧ್ಯಕ್ಷರೆ, ನಮ್ಮ ಸ್ಥಿತಿ ಏನಾಗಿದೆ? ಈ ರಾಜ್ಯದ ಸ್ಥಿತಿ ಗತಿಗಳು ಏನಾಗಿವೆ? ಅದರ ಬಗ್ಗೆ ಯಾರಾದರೂ ನಮ್ಮ ಹಿರಿಯ ಸದಸ್ಯರುಗಳು, ಅದು ವಿರೋಧಪಕ್ಷದವರಾಗಿರಬಹುದು, ಅಥವಾ ನಮ್ಮ ರೂಲಿಂಗ್ ಪಾರ್ಟಿಯವರಾಗಿರಬಹುದು. ಅಥವಾ independent ಆಗಿ ಗೆದ್ದಿರುವಂತಹ ಸದಸ್ಯರುಗಳಾಗಿರಬಹುದು. ಯಾರಾದರೂ ಚರ್ಚೆ ಮಾಡಿ ನಮ್ಮ ಮನೆ ಕರ್ನಾಟಕಕ್ಕೆ ಬೆಂಕಿ ಬಿದ್ದಿದೆ. ಅದರ ಬಗ್ಗೆ ಚರ್ಚೆ ಮಾಡೋಣವೆಂದು ಹೇಳುವುದನ್ನು ಬಿಟ್ಟು, ಅದು ಯಾವುದೋ ವಿಚಾರಕ್ಕೆ , ಮೇಲ್ಮನೆಯಲ್ಲಿ ಅವರು ಕಿತ್ತಾಡಲಿ, ಅದು ಒಂದು ವರ್ಷದವರೆಗೂ ಕಿತ್ತಾಡುತ್ತಾರಾ? ನೋಡೋಣ. ಆದರೆ ಕೆಳಮನೆಯಲ್ಲಿ ತಾವು ಕಾವೇರಿ

ವಿಚಾರವನ್ನು ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿ ಕೊಡದೇ, ನಾವು ಅಸಂಸದೀಯ ಪದಗಳೆಲ್ಲವನ್ನು ಬಳಸಬೇಕಾಗುತ್ತದೆ. ಇವತ್ತು ನಾವು ಮಂಡ್ಯದಲ್ಲಿ, ಮೈಸೂರಿನಲ್ಲಿ ಓಡಾಡುವುದಕ್ಕೆ ಆಗುತ್ತಿಲ್ಲ. ಆದರ ಬಗ್ಗೆ ಏನಾದರೂ ವಿಚಾರಗಳನ್ನು ಚರ್ಚೆ ಮಾಡಿ, ನಾವು ಮುಂದಕ್ಕೆ ಏನು ಮಾಡಬೇಕೆಂದು ಚರ್ಚೆ ಮಾಡುವುದು ಬಿಟ್ಟು, ಈ ರೀತಿ ಸದನದ ಸಮಯವನ್ನು ಹಾಳು ಮಾಡುವಂಥಾದ್ದು ನಿಜವಾಗಿಯೂ ನಮಗೆ ಬೇಸರವನ್ನು ತಂದಿದೆ. ದಯಮಾಡಿ ಮೇಲ್ಮನೆಯನ್ನು ರದ್ದು ಮಾಡಬೇಕೆಂದು ನಾನು ಮನವಿ ಮಾಡುತ್ತೇನೆ.

ಅಧ್ಯಕ್ಷರು: ಈಗ ಮಾನ್ಯ ಮಂತ್ರಿಯವರು ಉತ್ತರ ಹೇಳಬೇಕು.

ಶ್ರೀ ಎಂ.ಪಿ.ಪ್ರಕಾಶ್ (ಗೃಹ ಕಾನೂನು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಈಗಾಗಲೇ ಹೇಳಿದಂತೆ ಕಾವೇರಿ ವಿಚಾರ ಬಹಳ ಮುಖ್ಯವಾಗಿ ಚರ್ಚೆಯಾಗಲೇ ಬೇಕಾದದ್ದು. ಎಲ್ಲಾ ಸದಸ್ಯರಿಗೂ ಮಾತನಾಡುವ ಅವಕಾಶ ಏನು ಇದೆ, ಅದಕ್ಕೆ ಎಲ್ಲರ ಒಪ್ಪಿಗೆ ಕೂಡ ಇದೆ. ಇನ್ನು ಮಾನ್ಯ ಜೆ.ಸಿ.ಮಾಧುಸ್ವಾಮಿಯವರು ಹೇಳಿದಂತೆ, ಸರ್ವ ಪಕ್ಷಗಳಿಗೆ ನಮ್ಮ ಅಂತರ್ಗತ ಅಧಿಕಾರವನ್ನು ಹೇಗೆ ಕೊಡಬೇಕೆಂಬ ಬಗ್ಗೆ ಹೇಳಿದ್ದಾರೆ. ಅದು ಸಂಪೂರ್ಣ, ಇದು ಒಂದು ಸಾರ್ವಭೌಮವಾಗಿ ಇರುವಂತಹ ಜನಪ್ರತಿನಿಧಿಗಳಿಂದ ಕೂಡಿರುವಂತಹ ಒಂದು ಸದನವಾಗಿದೆ. ಆದುದರಿಂದ ನಾವು ಒಮ್ಮತದ ಅಭಿಪ್ರಾಯದ ಮೂಲಕ ಅಲ್ಲಿ ಸಲಹೆ ರೂಪದ ವಿಚಾರಗಳನ್ನು ನಾವು ಒಂದು ತೀರ್ಮಾನದ ರೂಪದಲ್ಲಿ ಅಳವಡಿಸಬೇಕಾಗುತ್ತದೆ. ಆ ಕಾರಣಕ್ಕಾಗಿಯೇ ತಡ ಮಾಡಿದ್ದೇವೆ, ಇಲ್ಲದಿದ್ದರೆ ನಾವು ಇವತ್ತೆ ಒಂದು ಗೊತ್ತುವಳಿಯನ್ನು ತಯಾರು ಮಾಡಿ ಹೇಳಬಹುದು. ಆದರೆ ಮುಂದಿನ ಮಾರ್ಗೋಪಾಯಗಳು ಏನು? ಎನ್ನುವುದನ್ನು ಸೂಕ್ಷ್ಮವಾಗಿ ಆದರೂ ಆ ತೀರ್ಮಾನಗಳನ್ನು ಗೊತ್ತುವಳಿಯಲ್ಲಿ ತರಬೇಕಾಗುತ್ತದೆ. ಆ ಕಾರಣಕ್ಕಾಗಿ ಮುಂದು ಹಾಕಿದ್ದೇವೆ. ಇನ್ನು ಎರಡು, ಮೂರು, ದಿವಸಗಳಲ್ಲಿ ಈ ಪ್ರಶ್ನೆ ಏನು ಅಷ್ಟು ದೊಡ್ಡದಲ್ಲ. ಸಾರ್ವಭೌಮ ಹಕ್ಕು ಈ ಸದನಕ್ಕೆ ಇರುತ್ತದೆ. ನಿಮ್ಮ ಸಲಹೆಯ ಹಿನ್ನೆಲೆಯಲ್ಲಿ ನಮ್ಮ ಕಾವೇರಿ ಕಣಿವೆಯಲ್ಲಿ ಬಂದಿರುವಂತಹ ಅನೇಕ ಸದಸ್ಯರ ಸಲಹೆಗಳ ಹಿನ್ನೆಲೆಯಲ್ಲಿ ಎಲ್ಲರಿಗೂ ಒಪ್ಪಿತವಾಗುವಂತಹ ತೀರ್ಮಾನವನ್ನು ನಿಮ್ಮ ಸಲಹೆ ಮೇಲೆ ತಯಾರಿಸಿ, ಆ ತೀರ್ಮಾನವನ್ನು ಇಲ್ಲಿ ಮಂಡಿಸಿ, ನಾವು ಈ ಸದನದ ಸಾರ್ವಭೌಮತ್ವವನ್ನು ಎತ್ತಿ ಹಿಡಿಯುವುದಕ್ಕೆ ಸರ್ಕಾರ ಬದ್ಧವಾಗಿದೆಯೆಂಬ ಮಾತನ್ನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, 5ನೇ ತಾರೀಖಿನಿಂದ 14ನೇ ತಾರೀಖಿಗೆ ಬಂದರೂ ನಾವು ಇನ್ನೂ ಏನು ತೀರ್ಮಾನಕ್ಕೆ ಬಂದಿಲ್ಲವೆಂದು ಹೇಳಿದರೆ, ಯಾರಿಗೂ ಇದರ ಬಗ್ಗೆ ತೀವ್ರತೆ ಇಲ್ಲ, ಕಾಳಜಿ ಇಲ್ಲವೆಂದು ಹೇಳಬಹುದು.

ಅಧ್ಯಕ್ಷರು: ಆ ರೀತಿ ಭಾವಿಸುವುದಕ್ಕೆ ಆಗುವುದಿಲ್ಲ, ತಾವು ಏಕೆ ಆ ರೀತಿ ಭಾವಿಸುತ್ತೀರಿ?

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಯಾವತ್ತಾದರೂ ಚರ್ಚೆಗೆ ಒಂದು ನಿರ್ಣಯವನ್ನು ಮಂಡಿಸಿದ್ದಿರಾ? ಈ ಸದನದಲ್ಲಿ ಚರ್ಚೆಯಾಗಬೇಕು, ನಾವು ಏನು ಮಾಡಬೇಕೆಂಬುದು ಏನಾದರೂ.....

ಅಧ್ಯಕ್ಷರು: ನಿಮ್ಮೆಲ್ಲರ ಅಭಿಪ್ರಾಯಗಳನ್ನು ತೆಗೆದುಕೊಂಡು ಮಂಡಿಸುತ್ತೇವೆಂದು ಮಾನ್ಯ ಮಂತ್ರಿಯವರು ಹೇಳಿದ್ದಾರೆ. ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 10.00 ಗಂಟೆಗೆ ಸೇರುವುದು.

(ಸದನವು ಮಧ್ಯಾಹ್ನ 3 ಗಂಟೆ 57 ನಿಮಿಷಕ್ಕೆ ಮುಕ್ತಾಯಗೊಂಡು ಪುನ: ದಿನಾಂಕ 15ನೇ ಫೆಬ್ರವರಿ ಮಾಹೆ 2007ರ ಗುರುವಾರದಂದು ಬೆಳಿಗ್ಗೆ 10.00ಗಂಟೆಗೆ ಸೇರಲು ನಿಶ್ಚಯಿಸಿತು)